ಆ) ಹೆಚ್.ಟಿ.ಯಲ್ಲಿ ವಿದ್ಯುತ್ ಸಂಪರ್ಕವನ್ನು ಹೊಂದುವುದರಿಂದ ಕೈಗಾರಿಕೆಗಳಿಗೆ ಹಲವಾರು ಅನುಕೂಲಗಳಿವೆ. ವ್ಯವಸ್ಥೆ ಸುಧಾರಣೆ ಮತ್ತು ಒಳ್ಳೆಯ ವೋಲ್ಟೇಜ್‌ನಲ್ಲಿ ವಿದ್ಯುತ್ ಸರಬರಾಜನ್ನು ನೀಡಲು ಟ್ರಾನ್ಸ್‌ಫಾರ್ಮರನ್ನು ಕೂಡಿಸಲು ಸ್ಥಳಾವಕಾಶ ಬೇಕಾಗುತ್ತದೆ. ಒಂದು ವೇಳೆ ಟ್ರಾನ್ಸ್‌ಫಾರ್ಮರ್ ಕೂಡಿಸಲು ಸ್ಥಳಾವಕಾಶವು ಇಲ್ಲದೇ ಇದ್ದಲ್ಲಿ ಅಂತಹ ಸಂದರ್ಭಗಳಲ್ಲಿ ಮಂಡಳಿಯು ಸವಿಸ್ತಾರವಾಗಿ ಪರಿಶೀಲಿಸಿ ಸೂಕ್ತ ಪರ್ಯಾಯ ವ್ಯವಸ್ಥೆಯನ್ನು ಮಾಡಲು ಕ್ರಮ ತೆಗೆದು ಕೊಳ್ಳುತ್ತಿದೆ.

ಇ) ವಿದ್ಯುತ್ ಕೊರತೆ ಮತ್ತು ವಿದ್ಯುತ್ ಖರೀದಿ ವೆಚ್ಚದಲ್ಲಿ ಹೆಚ್ಚಳ ವಾಗಿರುವ ಈಗಿನ ಪರಿಸ್ಥಿತಿಯಲ್ಲಿ ಪ್ರಸರಣೆ ಮತ್ತು ವಿತರಣೆಯಲ್ಲಿನ ನಷ್ಟವನ್ನು ಕಡಿಮೆ ಮಾಡುವುದು ಅತ್ಯಗತ್ಯವಾಗಿದೆ. ವಿದ್ಯುತ್ ಸ್ಥಾವರಗಳಿಗೆ ಹೆಚ್.ಟಿ. ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದರಿಂದ ವಿದ್ಯುತ್ ವಿತರಣೆಯಲ್ಲಿ ಉಂಟಾಗುವ ನಷ್ಟವನ್ನು ಕಡಿಮೆ ಮಾಡಬಹುದಾಗಿದೆ. ಎಲ್.ಟಿ. ಕಾರ್ಖಾನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಬೇಕಾಗುವ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಲೈನ್ ಮುಂತಾದ ಕಾರ್ಯಗಳಿಗೆ ಹೆಚ್ಚುವರಿ ಬಂಡವಾಳವನ್ನು ಹಾಕ ಬೇಕಾಗುತ್ತದೆ. ಹೆಚ್.ಟಿ. ಆಧಾರದ ಮೇಲೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದರಿಂದ ವಿದ್ಯುತ್ ಗುಣಮಟ್ಟದಲ್ಲಿ ಸುಧಾರಣೆ ಆಗುತ್ತದೆ. ಹಾಗೂ ಎಲ್.ಟಿ. ವಿತರಣಾ ಮಾರ್ಗಗಳಲ್ಲಿ ಅನಿರೀಕ್ಷಿತ ವ್ಯತ್ಯಯಗಳಿಂದ ಹಾಗೂ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳಲ್ಲಿನ ಹೆಚ್ಚಿನ ಹೊರೆ ಮತ್ತು ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಯಿಂದ ಉಂಟಾಗಬಹುದಾದ ವಿದ್ಯುತ್ ಅಡಚಣೆಗಳನ್ನು ತಪ್ಪಿಸಬಹುದು. ರಾಜಸ್ತಾನ, ಮಹಾರಾಷ್ಟ್ರ, ಆಂಧ್ರ ಪ್ರದೇಶ ರಾಜ್ಯಗಳಲ್ಲೂ ಸಹ ಎಲ್.ಟಿ. ಸ್ಥಾವರಗಳ ಮಿತಿಯನ್ನು 67 ಹೆಚ್.ಪಿ. : 75 ಹೆಚ್.ಪಿ.ಗೆ ಇಡಲಾಗಿದೆ. ಈ ಕಾರಣಗಳಿಂದ 67 ಹೆಚ್.ಪಿ. ಮತ್ತು ಇದಕ್ಕಿಂತ ಮೇಲ್ಪಟ್ಟು ವಿದ್ಯುತ್ ಪಡೆಯುವ ಸ್ಥಾವರಗಳಿಗೆ ಹೆಚ್.ಟಿ.ಯಲ್ಲಿ ವಿದ್ಯುತ್ ಸರಬರಾಜನ್ನು ಪಡೆಯಬೇಕೆಂಬ ಬಗ್ಗೆ ಮಂಡಳಿಯು ವಿದ್ಯುತ್ ಸರಬರಾಜು ನಿಯಮಗಳಲ್ಲಿ ತಿದ್ದುಪಡಿಯನ್ನು ಮಾಡಿದೆ.

ಮೇಲೆ ತಿಳಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಈ ಹಿಂದೆ ಇದ್ದ ಕಾನೂನನ್ನು ಪುನಃ ಜಾರಿಗೊಳಿಸಲು ಸಾಧ್ಯವಿಲ್ಲ ಮತ್ತು ಹಾಲಿ ಜಾರಿಗೊಳಿಸಲಾಗಿರುವ ಎಲ್.ಟಿ. ಮಿತಿಯನ್ನು ಮುಂದುವರಿಸುವುದು ಸಮಂಜಸವಾಗಿದೆ.

ಅರೇಹಳ್ಳಿ ಗ್ರಾಮದ ಸ.ನಂ. : 39-40ರ ಭೂಸ್ವಾಧೀನ ಕೈ ಬಿಡುವುದು.

1717 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕ್ ಅರೇಹಳ್ಳಿ ಗ್ರಾಮದ ಸ.ನಂ. : 39 ಮತ್ತು 40ರಲ್ಲಿ ನವೋದಯ ನಿರ್ಮಾಣ ಸಹಕಾರ ಸಂಘದಪರವಾಗಿ ಭೂಸ್ವಾಧೀನದಿಂದ ಕೈಬಿಡುವಂತೆ ಸರ್ಕಾರದಿಂದ ಬೆಂಗಳೂರು ಅಭಿವೃದ್ಧಿ ಪ್ರಾದಿಕಾರಕ್ಕೆ ನಿರ್ದೇಶನ ನೀಡಿರುವುದು ನಿಜವೇ?

ಅ) ಹಾಗಿದ್ದಲ್ಲಿ, ಸರ್ಕಾರದ ನಿರ್ದೇಶನದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸೂಕ್ತ ಕ್ರಮ ಕೈಗೊಂಡಿದೆಯೇ?

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಇಲ್ಲ

ಆ) ನವೋದಯ ಗೃಹ ನಿರ್ಮಾಣ ಸಹಕಾರ ಸಂಘವು ಸಂಘದ ಸದಸ್ಯರು ಕಟ್ಟಡ ನಿರ್ಮಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 1992-93 ರಲ್ಲಿ ಆಕ್ಷೇಪಣಾರಹಿತ ಪತ್ರಗಳನ್ನು ಪಪಡೆದಿರುವುದರಿಂದ, ಸದರಿ ಜಮೀನನ್ನು ಭೂಸ್ವಾಧೀನದಿಂದ ಕೈಬಿಡುವಂತೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಇ) ಪ್ರಾಧಿಕಾರವು ನೀಡಿದೆಯೆಂದು ಹೇಳಲಾದ ಆಕ್ಷೇಪಣಾ ರಹಿತ ಪತ್ರಗಳನ್ನು ಸಕ್ಷಮಪ್ರಾಧಿಕಾರದ ಅನುಮೋದನೆಯೊಂದಿಗೆ ನೀಡಿಲ್ಲವಾದ್ದರಿಂದ ಅವುಗಳು ನಂಬಿಕೆಗೆ ಅರ್ಹವಾಗಿರುವುದಿಲ್ಲ, ಆದರೂ ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ, ಹಾಗೂ ನಿಯಮಾವಳಿಯಂತೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಬೆಳ್ಳಾರ ಮಸೀದಿಯಲ್ಲಿ ಹಣದುರುಪಯೋಗ

1719 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಬೆಳ್ಳಾರ ಗ್ರಾಮದಲ್ಲಿರುವ ಮಸೀದಿಗಾಗಿ ಸರ್ಕಾರವು ಇದುವರೆವಿಗೂ 1989ನೇ ಇಸವಿಯಿಂದ ಪುರೋಭಿವೃದ್ಧಿಗಾಗಿ ಮಂಜೂರು ಮಾಡಿದ ಹಣವೆಷ್ಟು?

2) ಮಂಜೂರಾದ ಹಣ ಅಂದಾಜಿನಂತೆ ಮತ್ತು ಜನರ ಅಪೇಕ್ಷೆಯಂತೆ ಖರ್ಚು ಮಾಡಲಾಗಿದೆಯೆ? ಹಣ ದುರುಪಯೋಗವಾಗಿರುವುದರ ಬಗ್ಗೆ ಸರ್ಕಾರವು ಸಾರ್ವಜನಿಕರಿಂದ ದೂರುಗಳೇನಾದರೂ ಬಂದಿದೆಯೇ?

3) ಬಂದಿದ್ದ ದೂರುಗಳ ವಿಚಾರಣೆ ಆಗಿದೆಯೇ ವಿಚಾರಣೆ ಅಂಶವೇನು, ದುರುಪಯೋಗವಾಗಿದ್ದ ಹಣದ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ಸಚಿವರು) :

1) ರೂ.50,000-00 ಗಳನ್ನು ಮಂಜೂರು ಮಾಡಲಾಗಿದೆ.

2) ಅಂದಾಜಿನಂತೆ ಹಣ ಖರ್ಚು ಮಾಡಲಾಗಿದೆ. ಮತ್ತು ಹಣ ಬಳಕೆ ಪತ್ರವನ್ನು ಪಡೆಯಲಾಗಿದೆ. ಸಾರ್ವಜನಿಕರಿಂದ ಹಣ ದುರುಪಯೋಗದ ಬಗ್ಗೆ ದೂರುಗಳು ಬಂದಿರುತ್ತದೆ.